b) What is the estimated cost?

c) When will the project commence, if not, why?

Sri S. Suresh Kumar (Minister for Urban Development Law and Parliamentary Affairs) :

a) Under ADB Assisted North Karnataka Urban Sector Investment Programme (NKUSIP) Underground sewerage work in some wards of Hubli-Dharwad Corporation limit has been taken up.

b) The total requirement for implementing the underground drainage for the entire Hubli-Dharwad town is Rs.800 Crores. Depending on the availability of funds under the ADB funded NKUSIP, a Detailed Project Report for Rs.144.03 Crores has been prepared Rs.100.20 Crores for Hubli and Rs.43.03 Crores for Dharwad.

c) The Process of inviting tenders would begin in 2009 for Providing underground sewerage system at Hubli. In Dharwad the process of selection of suitable land for Sewage Treatment Plant is in progress and civil work will commence only after land acquisition. This would be taken up in the next tranche.

974 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕು, ಹುಣಸೂರು ಪಟ್ಟಣದ ಒಳ ಚರಂಡಿಯ ಸಮಗ್ರ ಅಭಿವೃದ್ಧಿಗಾಗಿ ಪ್ರಸ್ತಾವನೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ;

ಇ) ಈ ಯೋಜನೆಗಳನ್ನು ಎಷ್ಟು ಕಾಲಮಿತಿಯೊಳಗೆ ಕೈಗೆತ್ತಿಕೊಳ್ಳ ಲಾಗುವುದು?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯಹಾರಗಳ ಸಚಿವರು) :

ಅ) ಬಂದಿದೆ.

ಆ) ಹುಣಸೂರು ಪಟ್ಟಣಕ್ಕೆ ಸಮಗ್ರ ಒಳಚರಂಡಿ ಯೋಜನೆ ಸಿದ್ಧ ಪಡಿಸಲು ಭೌಗೋಳಿಕ ಸಮೀಕ್ಷೆ ಕಾರ್ಯಕ್ಕಾಗಿ (Topographic survey)

ಪುರಸಭೆ ವತಿಯಿಂದ ರೂ 7.80 ಲಕ್ಷ ಮೊತ್ತವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಅವರ ಕೋರಿಕೆಯಂತೆ ಪಾವತಿಸಿರುತ್ತದೆ. ಭೌಗೋಳಿಕ ಸಮೀಕ್ಷೆ ಪೂರ್ಣಗೊಳ್ಳುವ ಹಂತದಲ್ಲಿದ್ದು ಯೋಜನಾ ವರದಿಯನ್ನು ಮಂಡಳಿಯ ವತಿಯಿಂದ ಶೀಘ್ರದಲ್ಲೇ ತಯಾರಿಸಿ ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾಪಿಸಲು ಕ್ರಮ ವಹಿಸಲಾಗುತ್ತಿದೆ. ಹಾಗೂ ಯೋಜನೆ ಕೈಗೆತ್ತಿಕೊಳ್ಳಲು ಪುರಸಭೆಯ ಕೌನ್ಸಿಲ್‌ನಲ್ಲಿ ದಿನಾಂಕ: 17-06-2009 ರಂದು ಸೂಕ್ತ ಠರಾವನ್ನು ಅಂಗೀಕರಿಸಲಾಗಿರುತ್ತದೆ.

ಇ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿದ ನಂತರ ಆದ್ಯತೆಯ ಮೇರೆಗೆ ಹಾಗೂ ಅನುದಾನ ಲಭ್ಯತೆಯನ್ನು ಆಧಾರಿಸಿ ಆದೇಶ ಹೊರಡಿಸಿ, ಈ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.

1068 ಶ್ರೀ ಶಂಕರಪಾಟೀಲ ಮುನೇನಕೊಪ್ಪ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಬಾವಿ-ಚಳ್ಳಕೇರಿ ರಸ್ತೆ ನಿರ್ಮಾಣ ನರಗುಂದ ಸರಹದ್ದಿನವರೆಗೆ ಮುಗಿದಿದ್ದು ನವಲಗುಂದ ಸರಹದ್ದಿನಲ್ಲಿ ಕೆಲಸ ಪ್ರಾರಂಭವಾಗಿಲ್ಲದಿರುವುದಕ್ಕೆ ಕಾರಣಗಳೇನು;

ಆ) ಈ ಕೆಲಸವನ್ನು ಮುಂದುವರೆಸುವ ಯೋಜನೆ ಸರ್ಕಾರದ ಮುಂದೆ ಇದೆಯೇ;

ಇ) ಈ ಯೋಜನೆ ಮುಂದುವರೆಸುವುದಿದ್ದಲ್ಲಿ ಯಾವಾಗ ಕಾಮಗಾರಿ ಪ್ರಾರಂಭಿಸಲಾಗುವುದು ಹಾಗೂ ಯಾವಾಗ ಪೂರ್ಣಗೊಳಿಸುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ), ಆ) ಮತ್ತು ಇ) ನವಲಗುಂದ ತಾಲ್ಲೂಕಿನ ರಾಜ್ಯ ಹೆದ್ದಾರಿ-45 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಮೂರು ವರ್ಷಗಳ ನಿರ್ವಹಣಾ ಪ್ಯಾಕೇಜ್‌ನಲ್ಲಿ ಸೇರ್ಪಡೆಯಾಗಿದ್ದು, 2005ರಿಂದ 2008ರವರೆಗೆ ಕೆಆರ್‌ಡಿಸಿಎಲ್ ವತಿಯಿಂದ ನಿರ್ವಹಣೆ ಮಾಡಲಾಗಿರುತ್ತದೆ.

ಈ ರಸ್ತೆಯ ಕಿ.ಮೀ. 95.95ರಿಂದ 107.95 ರವರೆಗೆ ಹಾಗೂ ಕಿ.ಮೀ. 107.95ರಿಂದ 115.25 ರವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಅನುಕ್ರಮವಾಗಿ ರೂ.130.00 ಲಕ್ಷಗಳು ಮತ್ತು ರೂ.140.00 ಲಕ್ಷಗಳ ಅಂದಾಜು